ಅಭಿವೃದ್ಧಿ (19) ಕೃಷಿಯಲ್ಲಿ ಪ್ಲಾಷ್ಟಿಕ್ ಬಳಕೆ (20) ವಾಣಿಜ್ಯ ಪುಷ್ಪಗಳ ಸಮಗ್ರ ಅಭಿವೃದ್ಧಿ (21) ಸಾಂಬಾರು ಬೆಳೆಗಳ ಸಮಗ್ರ ಅಭಿವೃದ್ಧಿ (22) ತಾಳೆ ಬೆಳೆ ಅಭಿವೃದ್ಧಿ ಯೋಜನೆ (23) ಸಮಗ್ರ ತೆಂಗು ಬೇಸಾಯ.

1999 ರಿಂದ 2002–03ನೇಯ ಸಾಲಿನವರೆಗೆ ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮಾಡಿದ ಒಟ್ಟು ಯೋಜನಾ ವೆಚ್ಚ 152.98 ಕೋಟಿ ರೂ.ಗಳು.

ಆ) 1999 ರಿಂದ 2002–03ನೇಯ ಸಾಲಿನವರೆಗೆ ಅನುಷ್ಠಾನಗೊಳಿಸಲಾದ ಯೋಜನೆಗಳಡಿ ರೈತರಿಗೆ ಮಂಜೂರು ಮಾಡಿದ ಸಹಾಯಧನದ ಮೊತ್ತ ರೂ. 104.00 ಕೋಟಿ ರೂ.ಗಳು.

ಇ) ವಿಶೇಷ ಘಟಕ ಯೋಜನೆಯಡಿಯಲ್ಲಿ ಪರಿಶಿಷ್ಟಜಾತಿ/ವರ್ಗದ ರೈತರಿಗೆ ನೀಡಲಾದ ಸೌಲಭ್ಯಗಳು ಇಂತಿವೆ–

1. 1/2 ಎಕರೆ ತೆಂಗಿನ ಅಥವಾ ಹಣ್ಣಿನ/ಹೂ/ತರಕಾರಿ ತೋಟದ ಅಭಿವೃದ್ಧಿಗಾಗಿ ಸಹಾಯಧನ ನೀಡುವುದು -·
2. ಈ ತೋಟಗಳ ನಿರ್ವಹಣೆಗೆ 2 ವರ್ಷಗಳ ಅವಧಿಯ ನಿರ್ವಹಣಾ ವೆಚ್ಚವನ್ನು ಭರಿಸಲು ಸಹಾಯಧನ ನೀಡಲಾಗುತ್ತಿದೆ.
3. ರೈತರ ಮನೆ ಮುಂದೆ ನೆಡಲು 2–4 ತೆಂಗಿನ ಗಿಡಗಳನ್ನು ವಿತರಿಸಲಾಗುತ್ತಿದೆ.
4. ರೈತ ಮಕ್ಕಳಿಗಾಗಿ ತೋಟಗಾರಿಕೆ ತರಬೇತಿ ನೀಡಲಾಗುವುದು.

2002–03ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಒಟ್ಟು 2805 ಫಲಾನುಭವಿಗಳು ಸೌಲಭ್ಯಗಳನ್ನು ಪಡೆದಿರುತ್ತಾರೆ.

ಶಿವಮೊಗ್ಗ ಜಿಲ್ಲೆಯಲ್ಲಿ ಅಂಗನವಾಡಿ ಕಟ್ಟಡಗಳು

3172 (3670) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು:

ಆ) ಹೆಚ್ಚು ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ.

ಇ) ಅಂಗನವಾಡಿ ಕೇಂದ್ರಗಳ ದುರಸ್ತಿಗೆ ಸರ್ಕಾರ ಹಣ ಬಿಡುಗಡೆ ಮಾಡಿದೆಯೇ: ಮಾಡಿದ್ದರೆ ವಿವರ ನೀಡುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) 179 ಅಂಗನವಾಡಿ ಕೇಂದ್ರಗಳು

ಆ) 11313 ಹೆಚ್ಚು ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರದಕ್ಕೆ ದಿನಾಂಕ: 28.06.02ರಂದು ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇದರಲ್ಲಿ ಶಿವಮೊಗ್ಗ ತಾಲ್ಲೂಕಿನಲ್ಲಿ 90 ಕೇಂದ್ರಗಳು ಸೇರಿರುತ್ತದೆ. ಕೇಂದ್ರ ಸರ್ಕಾರವು ಸದ್ಯಕ್ಕೆ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲು ಸಾಧ್ಯವಿಲ್ಲವೆಂದು ದಿನಾಂಕ: 16–09–02ರ ಪತ್ರದಲ್ಲಿ ತಿಳಿಸಿರುತ್ತದೆ.

ಇ) ಸರ್ಕಾರಿ ಆದೇಶ ಸಂಖ್ಯೆ: ಮಮ 119 ಐಸಿಡಿ 2001, ದಿನಾಂಕ: 03.01.02 ರಂತೆ 2002–03ನೇ ಸಾಲಿನಿಂದ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕಾಗಿ ನಿಗಧಿಪಡಿಸಿದ ಅನುದಾನದಲ್ಲಿ ಶೇ.5 ರಷ್ಟು ಹಣವನ್ನು ಅಂಗನವಾಡಿ ಕಟ್ಟಡಗಳ ದುರಸ್ತಿಗಾಗಿದೆ. ಉಪಯೋಗಿಸಿಕೊಳ್ಳಬಹುದಾಗಿದೆ.

ಸಂಬಂಧಪಟ್ಟ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಅನುದಾನದಿಂದಲೂ ದುರಸ್ತಿ ಕಾರ್ಯವನ್ನು ಕೈಗೊಳ್ಳಬಹುದಾಗಿದೆ.

ಕೊರಟಗೆರೆ ತಾಲ್ಲೂಕಿನಲ್ಲಿ ಅಂಗವಿಕಲರಿಗೆ ಒದಗಿಸಿರುವ ಸೌಲಭ್ಯ

3173 (3688) ಶ್ರೀ ಚನ್ನಿಗಪ್ಪ ಸಿ (ಕೊರಟಗೆರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಂಗವಿಕಲರಿಗೆ ಸರ್ಕಾರ ಒದಗಿಸಿರುವ ಸೌಲಭ್ಯಗಳು ಯಾವುವು?

ಆ) ಅಂಗವಿಕಲರ ಶ್ರೇಯೋಭಿವೃದ್ಧಿಗೆ ಸರ್ಕಾರ 2000–01, 2001–02, 2002–03ನೇ ಸಾಲಿನವರೆವಿಗೂ ವ್ಯಯ ಮಾಡಿರುವ ಅನುದಾನವೆಷ್ಟು?

ಇ) ಕೊರಟಗೆರೆ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಅಂಗವಿಕಲರಿಗೆ ಒದಗಿಸಿರುವ ಸೌಲಭ್ಯಗಳೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

ಅ) ರಾಜ್ಯದಲ್ಲಿ ಅಂಗವಿಕಲರಿಗೆ ಮುಖ್ಯವಾಗಿ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಪುನರ್ವಸತಿ, ಸಾಮಾಜಿಕ ಭದ್ರತೆ, ಯೋಜನೆಗಳ ಮೂಲಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ಮಾಡಿರುವ ವೆಚ್ಚದ ವಿವರ ಈ ಕೆಳಕಂಡಂತಿದೆ.

ವರ್ಷ	ಮಾಡಿರುವ ವ್ಯಯ (ರೂ.ಗಳಲ್ಲಿ)
2000–01	4223.70 ಲಕ್ಷ
2001–02	4480.23 ಲಕ್ಷ
2002–03	4421.60 ಲಕ್ಷ

ಇ) ಕೊರಟಗೆರೆ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಅಂಗವಿಕಲರಿಗೆ ಈ ಕೆಳಕಂಡಂತೆ ಸೌಲಭ್ಯಗಳನ್ನು ಒದಗಿಸಲಾಗಿದೆ.

ವಿವರ	2000–01	2001–02	2002–03
ಮಾಸಿಕ ಪೋಷಣಾ ಭತ್ಯೆ	1460	1552	1680
ವಿದ್ಯಾರ್ಥಿ ವೇತನ	64	46	63
ಆಧಾರ	02	–	01
ಸಾಧನ ಸಲಕರಣೆಗಳು	03	03	09
ಎನ್.ಹೆಚ್.ಎಫ್.ಡಿ.ಸಿ ಸಾಲ	–	–	03
ಒಟ್ಟು	**1529**	**1601**	**1756**

ತುಮಕೂರು ಜಿಲ್ಲೆಯ ಕೇಂದ್ರ ಸಹಕಾರಿ ಬ್ಯಾಂಕಿಗೆ ಮಂಜೂರಾತಿ ಸಿಬ್ಬಂದಿ

3174 (3689) ಶ್ರೀ ಚನ್ನಿಗಪ್ಪ (ಕೊರಟಗೆರೆ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಸಹಕಾರಿ ಸಂಸ್ಥೆಗಳು ಎಷ್ಟು: ಅವುಗಳಲ್ಲಿ ಲಾಭದಲ್ಲಿರುವ ಹಾಗು ನಷ್ಟದಲ್ಲಿರುವ ಸಹಕಾರಿ ಸಂಸ್ಥೆಗಳು ಎಷ್ಟು;